ಸಹ ಅಲ್ಲಿ, ಇಲ್ಲಿ, ಕೇಳಿದ್ದೇನೆ. ಈ ದೂರುಗಳನ್ನು ಕೇಳಿದ ತಕ್ಷಣ ನಾನು ಗ್ರಾಹಕರ ಹಿತರಕ್ಷಣೆಯನ್ನು ಗಮನಿಸಿಕೊಂಡು, ಒಂದು ಜಾಗೃತ ದಳವನ್ನು ಅಂದರೆ, ಗ್ರಾಹಕರ ಹಿತರಕ್ಷಣೆ ಮಾಡಿಕೊಂಡು, ಪಬ್ಲಿಕ್ ಗ್ರಿವೆನ್ಸ್ ಸೆಲ್ ಎಂದು ಮಾಡಲಾಗಿದೆ. ಇದರಲ್ಲಿ ಮಾನ್ಯ ಕೃಷ್ಣಯ್ಯರ್ ಅವರು, ಇನ್ನೂ ಅನೇಕ ಇಂತಹ ಮುಖಂಡರನ್ನೊಳಗೊಂಡ ಒಂದು ಪಬ್ಲಿಕ್ ಗ್ರಿವೆನ್ಸ್ ಸೆಲ್‌ನ್ನು ನನ್ನ ಅಧ್ಯಕ್ಷತೆಯಲ್ಲಿ, ಶಾಸಕರುಗಳು, ಮಂತ್ರಿಗಳು ಮತ್ತು ಪಬ್ಲಿಕ್ ಗ್ರಿವೆನ್ಸ್ ಸೆಲ್‌ನವರು ಈಗಾಗಲೇ ಪ್ರತಿ ಡೈರಿಯಲ್ಲಿ ಮೂಡಿದ್ದೇವೆ. ಬೆಂಗಳೂರು ನಗರದಲ್ಲಿ ವಿಶೇಷವಾಗಿ 5 ಲಕ್ಷ ಲೀಟರ್ ಹಾಲನ್ನು ಮಾರುತ್ತಿರುವ ಹಿನ್ನೆಲೆಯಲ್ಲಿ, ನಾವು ಈ ಪಬ್ಲಿಕ್ ಗ್ರಿವೆನ್ಸ್ ಸೆಲ್ ನವರು ಅಧಿಕಾರಿಗಳನ್ನೊಳಗೊಂಡು ಬೆಂಗಳೂರಿನಲ್ಲಿ ಕಳಿದ ವಾರ ಈ ಸಭೆ ನಡೆಸಿದ್ದೇವೆ. ಇಂತಹ ದೂರುಗಳು ಬಂದರೆ, ಅದು ಯಾರೇ ಏಜೆಂಟರು ಮಾಡಿರಲಿ, ಅಥವಾ ಲೋಡರ್ಸ್ ಮಾಡಿರಲಿ ಅಥವಾ ಡೈರಿಯವರು ಮಾಡಿರಲಿ, ಯಾರೇ ಮಾಡಿರಲಿ, ಅವರ ಮೇಲೆ ಉಗ್ರವಾದಂಥ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಹಿಂದೆಮುಂದೆ ಸರ್ಕಾರ ಯೋಚನೆ ಮಾಡುವುದಿಲ್ಲ ಎನ್ನತಕ್ಕಂಥ ಆಶ್ವಾಸನೆ ಕೊಡುತ್ತೇನೆ. ವಿರೋಧ ಪಕ್ಷದ ನಾಯಕರು ತುಮಕೂರು ಡೈರಿ ವಿಚಾರ ಹೇಳಿದ್ದಾರೆ. ಆ ತುಮಕೂರು ಡೈರಿಯ, ಯಾವ ಏಜೆಂಟ್ ಅಥವಾ ಯಾರಿಂದ ಮಾಡುತ್ತಿತ್ತು ಎನ್ನತಕ್ಕಂಥ ಮಾಹಿತಿ ನನಗೆ ಬೇಕಾಗಿದೆ. ಅದನ್ನು ತಂದರೆ, ನಾವು ಈಗಾಗಲೇ ಹೇಳಿದ್ದೇವೆ. 20 ಏಜೆಂಟರುಗಳನ್ನು ರದ್ದು ಮಾಡಿದ್ದೇವೆ.

ಶ್ರೀ ಆರ್. ವಿ. ದೇಶಪಾಂಡೆ : ತಾವು ಏಜೆಂಟ್ ಅಷ್ಟೇ ನೋಡಬಾರದು. ಡೈರಿ ಪಾಯಿಂಟ್ ಕೂಡ ನೋಡಬೇಕು.

ಶ್ರೀ ಕೆ. ಎನ್ . ನಾಗೇಗೌಡ : ಇದರಲ್ಲಿ ಮೂರು ಕಾರಣ. ಒಂದು ಏಜೆಂಟ್ಸ್ ಇರಬಹುದು, ಲೋಡರ್ಸ್ ಇರಬಹುದು ಅಥವಾ ಪ್ಯಾಕಿಂಗ್ ಇದೆ ನೋಡಿ, ಆ ಪ್ಯಾಕಿಂಗೂ ಸರಿ ಇಲ್ಲ. ಆ ಕ್ವಾಲಿಟಿಯೇ ಸರಿಯಿಲ್ಲವೆಂದು, ಈಗ ನಾವೆಲ್ಲಿ ತರಿಸಿಕೊಳ್ಳುತ್ತಿದ್ದೆವೋ ಆ ಪ್ಲಾಸ್ಟಿಕ್ ಪ್ಯಾಕಿಂಗ್‌ನ, ಆ ಗ್ರಾನ್ಯುಯಲ್ಸ್‌ನ್ನು ನಿಲ್ಲಿಸಿ, ಉತ್ತಮವಾದಂಥ ಗ್ರಾನ್ಯುಯಲ್ಸ್‌ನ್ನು ಕೊಂಡುಕೊಂಡು ಪ್ಯಾಕಿಂಗ್ ಮಾಡಬೇಕೆಂದು ಈಗಾಗಲೇ ನಿರ್ದೇಶನ ಕೊಟ್ಟಿದೆ. ಸ್ವಲ್ಪ ಕಾಲ ಕೊಡಲಿ, ಇಂತಹ ದೂರುಗಳು ಬಂದರೆ, ದಯವಿಟ್ಟು ನನಗೆ ತಿಳಿಸಲಿ. ಈಗಾಗಲೇ ಪ್ರತಿ ಡೈರಿಗೂ ದೂರವಾಣಿ ಕೊಟ್ಟಿದ್ದೇವೆ. ಮತ್ತು ಪಬ್ಲಿಕ್ ಗ್ರಿವನ್ಸ್ ಸೆಲ್‌ಗೆ ಮತ್ತೆ ವಾಟಾಳ್ ನಾಗಾರಾಜ್‌ರವರು ಚನ್ನರಾಯಪಟ್ಟಣಕ್ಕೆ ಹಾಲು ಹೋಗಿದೆ ಎಂದು ಹೇಳಿದರು. ಮೈಸೂರಿನಿಂದ ಅಂತ ಅದರ ಬಗ್ಗೆ ತನಿಖೆ ಮಾಡಲು ನಾನು ಈಗಾಗಲೇ ತನಿಖಾಧಿಕಾರಿಗಳನ್ನು ನೇಮಿಸಿದ್ದೇನೆ. ಅದರಲ್ಲೂ 25 ಸಾವಿರ ಲೀಟರ್ ಚನ್ನರಾಯಪಟ್ಟಣಕ್ಕೆ ಹೇಗೆ ಹೋಯಿತು ಏಕೆ ಹೋಯಿತು ?

ಶ್ರೀ ವಾಟಾಳ್ ನಾಗರಾಜ್ : ಚಾಮರಾಜನಗರದಿಂದ ತಂದಂತಹ 25 ಸಾವಿರ ಲೀಟರ್ ಹಾಲು ಸುರಿದಿದ್ದಾರೆ.

ಶ್ರೀ ಕೆ. ಎನ್. ನಾಗೇಗೌಡ : ಅದು ಏಕೆ ಸುರಿದಿದ್ದಾರೆ ಆಹಾಲು ಎಲ್ಲಿ ಹೋಗಿದೆ ಎನ್ನತಕ್ಕಂಥಾದ್ದನ್ನೇ ತನಿಖೆ ಮಾಡಲು ಆಜ್ಞೆ ಮಾಡಿದ್ದೇನೆ.

ಅಂಗನವಾಡಿ ಕಾರ್ಯಕರ್ತರ ಬಂಧನ

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ತಮ್ಮ ಪರವಾನಿಗೆಯನ್ನು ನಾನು ಪಡೆದು ಒಂದು ವಿಚಾರವನ್ನು ಮಾನ್ಯ ಸಮಾಜಕಲ್ಯಾಣ ಇಲಾಖಾ ಮಂತ್ರಿಗಳ ಗಮನಕ್ಕೆ ತಂದು ಉತ್ತರ ಬಯಸುತ್ತೇನೆ. ನಿನ್ನೆಯ ದಿನ ಅಂಗನವಾಡಿ ಕಾರ್ಯಕರ್ತರ ಬಗ್ಗೆ ನಾವೆಲ್ಲಾ ಸಾಕಷ್ಟು ಪ್ರಸ್ತಾಪ ಮಾಡಿದ್ದೇವೆ. ಇವತ್ತು ಬೆಳಿಗ್ಗೆ ಈ ಅಂಗನವಾಡಿ ಕಾರ್ಯಕರ್ತರು ಸುಮಾರು 500 ಜನರ ಒಂದು ನಿಯೋಗ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡತಕ್ಕಂಥ ಸಂದರ್ಭದಲ್ಲಿ ಬೆಳಿಗ್ಗೆ ಅವರನ್ನು ಲಾಠಿ ಚಾರ್ಜ್ ಮಾಡಿ ಪೋಲಿಸರು ಬಂಧಿಸಿ ಗಂಗೇನಹಳ್ಳಿ ಪೋಲೀಸ್‌ಸ್ಟೇಶನ್‌ನಲ್ಲಿ ಸುಮಾರು 500 ಜನ ಅಂಗನವಾಡಿ ಕಾರ್ಯಕರ್ತರನ್ನು ಮಹಿಳೆಯರನ್ನು ಬಂಧನದಲ್ಲಿಟ್ಟಿದ್ದಾರೆ, ಎನ್ನತಕ್ಕ ವಿಚಾರ ನನಗೆ ತಿಳಿದು ಬಂದಿದೆ. ಮತ್ತೆ ಆ ಪೋಲೀಸ್ ಸ್ಟೇಷನ್‌ನಲ್ಲಿ ಬಂದನದಲ್ಲಿರತಕ್ಕಂಥ ಈ ಸಂಘದ ಪದಾಧಿಕಾರಿಗಳು ದೂರವಾಣಿ ಮೂಲಕ ಮಾತನಾಡಿ ನನಗೆ ತಿಳಿಸಿದ್ದಾರೆ. ಬಂಧನ ಮಾಡುವುದರ ಜೊತೆಗೆ ಅವರ ಕಾರ್ಯದರ್ಶಿಯಾಗಿರತಕ್ಕಂಥ ಬಸವರಾಜ್ ಮತ್ತು ಅನಿಲ್ ಪ್ರಸಾದ್ ಹೆಗಡೆಯವರಿಗೆ ಲಾಠಿ ಏಟು ಸಹ ಬಿದ್ದಿದೆ. ಜೊತೆಗೆ ಏನಾಗಿದೆ ಅಂದರೆ, ಮುಖ್ಯಮಂತ್ರಿಗಳ ಮನೆ ಹತ್ತಿರ ಹೋಗಿದ್ದಾರೆ. ಖಾಸಗಿ ಮನೆ ಮುಖ್ಯ ಮಂತ್ರಿಗಳದ್ದು ಭೇಟಿ ಮಾಡುವುದಕ್ಕೆ ಆಗದೆ ಇರಬಹುದು ಅವರನ್ನು ಪೋಲೀಸ್ ವ್ಯಾನಿನಲ್ಲಿ ಹಾಕಿ ಪೋಲೀಸ್ ವ್ಯಾನ್‌ನಲ್ಲಿದ್ದಾಗ ಸಿಕ್ಕಾಪಟ್ಟೆ ಲಾಠಿಯಲ್ಲಿ ಹೊಡೆದಿದ್ದಾರೆ. ಇದರ ಬಗ್ಗೆ ಏಕೆ ಹೊಡೆದಿದ್ದಾರೆ ಏನು ಎನ್ನುವುದು ಗೊತ್ತಾಗಬೇಕು. ಮತ್ತೆ ಅದಾದ ನಂತರ ಮಾನ್ಯ ಮುಖ್ಯ ಮಂತ್ರಿಗಳು 4-5 ಜನ ಪಕ್ಷಾಧಿಕಾರಿಗಳನ್ನು ಕರೆಯಿಸಿ ಮಾತನಾಡಿ ಏಪ್ರಿಲ್ ತಿಂಗಳಲ್ಲಿ ಅವರ ಒಂದು ಬೇಡಿಕೆಯನ್ನು ಈಡೇರಿಸತಕ್ಕಂಥ ಭರವಸೆಯನ್ನೂ ಸಹ ಕೊಟ್ಟಿದ್ದಾರೆ. ನಾನಾದರೂ ಈ ಸಂದರ್ಭದಲ್ಲಿ ಮಾನ್ಯ ಸಮಾಜಕಲ್ಯಾಣ ಇಲಾಖಾ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳತಕ್ಕಂಥಾದ್ದು ಏನೆಂದರೆ ಈಗ ಪೋಲೀಸ್‌ನವರು ಅವರನ್ನು ಹೊಡೆದಿದ್ದಾರೆ. ಅವರಿಗೆ ಚಿಕಿತ್ಸೆಗೆ ಏರ್ಪಾಡು ಮಾಡತಕ್ಕಾಂಥದ್ದು ಒಂದು ಮತ್ತು ಅವರನ್ನು ತತ್‌ಕ್ಷಣ ಬಿಡುಗಡೆ ಮಾಡಬೇಕು. ಏಕೆಂದರೆ ಅವರು ರಾಜ್ಯದ ಬೇರೆ ಬೇರೆ ತಾಲ್ಲೂಕುಗಳಿಂದ ಬಂದಿದ್ದಾರೆ. ಅವರ ಮೇಲೆ ಯಾವುದೇ ರೀತಿಯ ಮೊಕದ್ದಮೆಗಳನ್ನು ಹಾಕದೆ ಅವರಿಗೆ ಬಿಡುಗಡೆ ಮಾಡಬೇಕು. ಮತ್ತೆ ಮಾನ್ಯ ಮುಖ್ಯ ಮಂತ್ರಿಗಳು ಅವರಿಗೆ ಏನು ಭರವಸೆಯನ್ನು ಕೊಟ್ಟಿದ್ದಾರೆ, ಅದನ್ನು ಈ ಸದನಕ್ಕೆ ತಿಳಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ಅಂಗನವಾಡಿ ಕಾರ್ಯಕರ್ತರು ತಮ್ಮನ್ನು ಭೇಟಿ ಮಾಡಲು ಒಂದು ನಿಯೋಗ ಬಂದಿತ್ತು. ಈ ಒಳಗಿನ ಬಾಗಿಲಲ್ಲಿ ಅವರಿಗೆ ಅಪಮಾನವಾದ ವರ್ತನೆಯಲ್ಲಿ ಹೆಣ್ಣು ಮಕ್ಕಳ ಮೇಲೆ ಪೋಲೀಸಿನವರು ನಡೆದುಕೊಂಡಿದ್ದಾರೆ. ಇದು ನಿಜವಾದುದು ಕೆಲವರು ಏಟು ತಿಂದಿರತಕ್ಕಂಥವರು ಬಂದಿದ್ದರು. ತಮ್ಮ ಹತ್ತಿರ ಕರೆದುಕೊಂಡು ಬರಬೇಕೆಂದು ಇದ್ದರು. ಬಾಗಿಲಲ್ಲಿ, ಯಾರೂ ಒಳಗಡೆ ಬಿಡಲಿಲ್ಲ, ಮುಖ್ಯ ಮಂತ್ರಿಗಳ ಮನೆಯ ಮುಂದೆ ಶಾಂತವಾದ ರೀತಿಯಿಂದ ಹೋಗಿ ಒಂದು ಕಡೆ ಪೋಲೀಸಿನವರನ್ನೇ ಕೇಳಿದರು. ನಾವು ಎಲ್ಲಿ ಕುಳಿತುಕೊಳ್ಳೋಣ ಹೇಳಿ ಎಂದು. ನಿಮ್ಮನ್ನು ಕುಳಿತುಕೊಳ್ಳುವುದಕ್ಕೆ ಬಿಡುವುದಿಲ್ಲ ಹೊರಗಡೆ ಹಾಕುತ್ತೇವೆ ಎಂದು, ನೇರವಾಗಿ ಅವರನ್ನು ಹೊರಗಡೆ ದಬ್ಬಿ ಸ್ಟೇಶನ್‌ನಲ್ಲಿ ಈಗಲೂ ಇಟ್ಟಿದ್ದಾರೆ. ಅವರನ್ನು ಬಿಡುಗಡೆ ಮಾಡತಕ್ಕಂಥ ವ್ಯವಸ್ಥೆ ಕೂಡ ಆಗಿಲ್ಲ . ಅಲ್ಲಿ ಪ್ರಚೋದನೆ ಆಗಿಲ್ಲ. ಘೋಷಣೆ ಕೂಗಿಲ್ಲ ಮುಖ್ಯಮಂತ್ರಿಗಳಿಗೆ ಮನವಿ ಕೊಡುತ್ತೇನೆ ಎಂದು ಹೇಳಿ ಹೋಗಿದ್ದರು. ಪೋಲೀಸಿನವರು ಅವರ ಜೊತೆ ಮಾತನಾಡಬಹುದಾಗಿತ್ತು. ಬೇರೆ ಕಡೆ ಕೂಗಿಸುತ್ತೇವೆ ಬಿಡುತ್ತೇವೆ ಎಂದು ಯಾವುದನ್ನು ಮಾಡದೆ ಮಹಿಳೆಯರ ಮೇಲೆ ಮಾಡಿರತಕ್ಕಂಥ ಕೃತ್ಯ ಏನು ಇದೆ ಇದು ನಿಜವಾಗಲೂ ಬಹಳ ಹೇಯ

ಕೃತ್ಯವಾಗಿದೆ. ಇದರ ಬಗ್ಗೆ ಒಂದು ತನಿಖೆ ಕೂಡ ಆಗಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಮಾಡುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ , ದೊರೆ ಹತ್ತಿರ ದೂರು ಹೇಳದೆ ಇನ್ನು ಎಲ್ಲಿ ಹೇಳಬೇಕು ಹೇಳಿ. ನಿನ್ನೆ ಎಲ್ಲಾ ಪ್ರಸ್ತಾಪ ಮಾಡಿದ್ದೇವೆ. ಪ್ರಸ್ತಾಪ ಮಾಡಿದಾಗ, ನಾವು ಅವರಿಗೆ ಅನುಕೂಲ ಮಾಡಿಕೊಡುತ್ತೇವೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ಏನೂ ಇಲ್ಲ ಇವತ್ತು ಲಾಠಿ ಚಾರ್ಜ್ ಮಾಡಿದ್ದಾರೆ. ಮುಖ್ಯಮಂತ್ರಿಗಳ ಹತ್ತಿರ ಕೇಳುವುದಕ್ಕೆ ಹೋಗದೆ ಇನ್ನು ಎಲ್ಲಿ ಕೇಳಬೇಕು. ಪ್ರಜಾಪ್ರಭುತ್ವದಲ್ಲಿ ಅವರಿಗೆ ಉಳಿದಿರುವುದು ಒಂದೇ ದಾರಿ ನಮಗೆ ತೊಂದರೆ ಆಗುತ್ತಿದೆ ನಾವು ವೈದ್ಯರ ಕೆಲಸ ಮಾಡುತ್ತಿದ್ದೇವೆ. ಶಿಕ್ಷಕರ ಕೆಲಸ ನಾವು ಮಾಡುತ್ತಿದ್ದೇವೆ, ಅಕೌಂಟೆಂಟ್ ಕೆಲಸ ನಾವು ಮಾಡುತ್ತಿದ್ದೇವೆ, ತಾಯಿ ಕೆಲಸ ನಾವು ಮಾಡುತ್ತಿದ್ದೇವೆ. ನಮಗೆ ಅನುಕೂಲ ಮಾಡಿಕೊಡಿ ಅಂದರೆ ಇವರು ಪೋಲೀಸಿನವರನ್ನು ಬಿಟ್ಟು ಅವರಿಗೆ ಹೊಡೆಸಿದರೆ, ಏನು ಮಾಡಬೇಕೆಂದು ನನಗಂತೂ ಅರ್ಥವಾಗುತ್ತಿಲ್ಲ. ಇದರ ಬಗ್ಗೆ ತಕ್ಷಣ ಏನು ಕ್ರಮ ಕೈಗೊಳ್ಳುತ್ತೀರಿ ಎಂದು ತಿಳಿಸಬೇಕಾಗುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಏನು ನಮ್ಮ ಸ್ನೇಹಿತರುಗಳು ಹೇಳಿದ್ದಾರೆ, ಅದರ ಬಗ್ಗೆ ನಾನು ಒಂದು ಮಾತು ಸರ್ಕಾರದ ಗಮನಕ್ಕೆ ತರುತ್ತೇನೆ. ನನಗೂ ಮುಂಜಾನೆ ಟೆಲಿಫೋನ್ ಮುಖಾಂತರ ನಡೆದ ಘಟನೆ ನನ್ನ ಗಮನಕ್ಕೆ ಬಂತು. ನಾನು ಈ ವಿಷಯ ರೈಜ್ ಮಾಡುತ್ತೇನೆಂದು ತಮಗೆ ನಾನು ಅಪ್ಪಣೆ ಕೇಳಿದೆ. ಜನರಲ್ ಆಗಿ ಮುಖ್ಯಮಂತ್ರಿಗಳು ಮುಂಜಾನೆ ಬೇಗನೆ ಹೊರಗೆ ಬರುತ್ತಾರೆ. ಏಕೆಂದರೆ ಕೃಷ್ಣಾದಲ್ಲಿ ಜನ ಅವರನ್ನು ಭೇಟಿ ಆಗುವುದು, ಈ ಜನ ನಿನ್ನೆ ಮುಖ್ಯಮಂತ್ರಿಗಳನ್ನು ಭೇಟಿ ಆಗಿಲ್ಲ ಅದಕ್ಕೆ ಮನೆಗೆ ಹೋಗಿದ್ದಾರೆ. ಮನೆಗೆ ಹೊದಾಗ ಇಷ್ಟು ಜನ ಬರಬೇಡಿ ಇಲ್ಲಿ ಟ್ರಾಫಿಕ್ ಪ್ರಾಬ್ಲಂ ಆಗುತ್ತದೆ. ಒಂದು ನಾಲ್ಕು ಜನ ಭೇಟಿ ಆಗಿ ಎಂದು ಪೋಲೀಸಿನವರು ಹೇಳಬೇಕಾಗಿತ್ತು. ಅದು ಏನೂ ಮಾಡದೆ ಏನಃ ಅನಿಲ್‌ಪ್ರಸಾದ್ ನಮ್ಮ ಪಾರ್ಟಿ ಸೆಕ್ರೆಟರಿ, ಅವರು ಹೆಚ್.ಎಂ.ಕೆ.ಪಿ. ಮುಖಂಡ ಮತ್ತು ಬಸವರಾಜು ಅನ್ನುವವರಿದ್ದಾರೆ. ಅವರಿಗೆ ಅಲ್ಲೇ ಲಾಠಿ ಚಾರ್ಜು ಮಾಡಿದ್ದಾರೆ. ಕೆಲವು ಹೆಣ್ಣು ಮಕ್ಕಳಿಗೂ ಲಾಠಿ ಚಾರ್ಜು ಮಾಡಿದ್ದಾರೆ. ಅಲ್ಲಿ ಮಹಿಳಾ ಪೋಲೀಸು ಇಲ್ಲ. ಈ ಪೋಲೀಸಿನವರೇ ಹೆಣ್ಣು ಮಕ್ಕಳನ್ನು ಹಿಡಿದು ಗಾಡಿಯೊಳಗೆ ಹಾಕಿದ್ದಾರೆ., ಇದರಿಂದ ಹೆಣ್ಣು ಮಕ್ಕಳಿಗೆ ಸಾಕಷ್ಟು ಅವಮಾನವಾಗಿದೆ ಮಾನ್ಯ ಮಂತ್ರಿಯವರು ಪಗಾರ ಹೆಚ್ಚು ಮಾಡಿಕೊಟ್ಟಿಲ್ಲ. ಆದರೆ ಪರಿಶೀಲನೆ ಮಾಡುತ್ತೇನೆಂದು ಭರವಸೆ ಕೊಟ್ಟಿರಿ. ನಮ್ಮ ಸಿಂಧ್ಯಾರವರು ಒಂದು transport charges ಬಗ್ಗೆ, ಸಲಹೆ ಕೊಟ್ಟರು. ಅದನ್ನು ಕೊಡುವ ಬಗ್ಗೆ ಪರಿಶೀಲನೆ ಮಾಡಿ ಸರ್ಕಾರದವರು ನಮಗೆ ಸಹಾಯ ಮಾಡಬಹುದೆಂದು ಪಾಪ ಅವರು ಬಂದರೆ, ಸಹಾಯ ಮಾಡಲಿಲ್ಲ. ಲಾಠಿ ಏಟು ಅಷ್ಟೇ ಕೊಟ್ಟಿರಿ. ಪೋಲೀಸರಿಂದ ಲಾಠಿ ಚಾರ್ಜು ಮಾಡುವ ಅವಶ್ಯಕತೆ ಇತ್ತೇನು? ಅಲ್ಲಿ ಮಹಿಳಾ ಪೋಲೀಸಿನವರು ಏಕೆ ಇರಲಿಲ್ಲ? ಪುರುಷರು ಏಕೆ ಹೆಣ್ಣು ಮಕ್ಕಳ ಮೇಲೆ ಕೈ ಹಾಕಿದ್ದಾರೆ. ಇದರ ಬಗ್ಗೆ ಸರ್ಕಾರ ಸ್ಪಷ್ಟೀಕರಣ ನೀಡಬೇಕು. ಇವತ್ತು ಹೆಬ್ಬಾಳ ಪೋಲೀಸ್ ಠಾಣೆ ಮತ್ತಿತರ ಪೋಲೀಸ್ ಠಾಣೆಗಳಲ್ಲಿ ಇವರು ಏನಿದ್ದಾರೆ? ಅವರನ್ನು ತಕ್ಷಣ ಬಿಡುಗಡೆ ಮಾಡಬೇಕು ಮತ್ತು ಅದರ ಬಗ್ಗೆ ಸರ್ಕಾರದಿಂದ ಸ್ಪಷ್ಟೀಕರಣ ಕೇಳುತ್ತೇನೆ.

ಡಾ॥ ಎನ್. ಬಿ. ನಂಜಪ್ಪ : ಅಧ್ಯಕ್ಷರೆ ಆ ಘಟನೆ ಆದಾಗ ನಾನು ಅಲ್ಲಿದ್ದೆ. ನಮ್ಮ ತಾಲ್ಲೂಕಿನಿಂದ ಹೆಣ್ಣು ಮಕ್ಕಳು ಬಂದಿದ್ದಾರೆ. ಅವರು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದರು. ಒಳಗೆ ಕರೆಯಿಸಿ ಅವರ ಜೊತೆ ಮಾತನಾಡಿದಂಥ ಸಂದರ್ಭದಲ್ಲಿ ನಾನು ಇದ್ದೆ. ಈಗ ಇಲ್ಲಿ ಏನು ಹೇಳುತ್ತಿದ್ದಾರೆ these are all exaggered reports as far as my knowledge goes.

ಅಧ್ಯಕ್ಷರು: ತಾವು ಏನು ಹೇಳಬೇಕೋ ಅದನ್ನು ಹೇಳಿ.

ಡಾ॥ ಎನ್. ಬಿ. ನಂಜಪ್ಪ : ಪ್ರತಿನಿಧಿಗಳಿಗೆ ಮುಖ್ಯಮಂತ್ರಿಗಳು ಏನು ಹೇಳಿದರು ಎಂದರೆ, ನೀವು ಇಲ್ಲಿ ಬಂದು ಧಿಕ್ಕಾರ ಕೂಗುವುದು ಬೇಡ. ನನಗೆ ಗೊತ್ತಿದೆ. ನಾನು ಏಪ್ರಿಲ್‌ನಲ್ಲಿ ಗೌರವಧನ ಹೆಚ್ಚು ಮಾಡುತ್ತೇನೆ. ನಿಮ್ಮ ಸಮಸ್ಯೆ ನನಗೆ ಗೊತ್ತಾಗಿದೆ. Social Welfare Minister ನನ್ನ ಜೊತೆ ಮಾತನಾಡಿದ್ದಾರೆ. ನೀವು ಸಮಾಧಾನವಾಗಿ ಬಂದು, ಮನವಿ ಕೊಡಿ. ನಾನು ಖಂಡಿತಾ ಎಲ್ಲಾ ಮಾಡಿ ಕೊಡುತ್ತೇನೆಂದು ಹೇಳಿದರು. ಆ ಹೆಣ್ಣು ಮಕ್ಕಳು ಏನು ಹೇಳಿದರೆಂದರೆ, ಅಲ್ಲಿ ಎಲ್ಲೋ ಬೆಳಗಾಂನಲ್ಲಿ ಬರತಕ್ಕಂಥ ದಾರಿಯಲ್ಲಿ ಕೆಲವರನ್ನು detain ಮಾಡಿ ಕರೆದುಕೊಂಡು ಹೋಗಿದ್ದರೆಂದು ಆ ಹೆಣ್ಣು ಮಕ್ಕಳು ದೂರನ್ನು ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದರು.

ಅಲ್ಲಿ ಏನೂ ನಡೆಯಲಿಲ್ಲ. ನಾನು ಕೂಡಾ ಅಲ್ಲಿದ್ದೆ. ಅಲ್ಲಿ ಅಂಥ ಗೊಂದಲಮಯ ವಾತಾವರಣ ಏನೂ ಆಗಿಲ್ಲ ಎನ್ನುವುದು ನನಗೆ ಗೊತ್ತಿರತಕ್ಕಂಥಾದ್ದು. ಇಲ್ಲಿ ಹೇಳುತ್ತಿರುವುದನ್ನು ನೋಡಿದರೆ ಅಲ್ಲಿ ಏನೋ ಪ್ರಮಾದವಾಗಿದೆ ಎನ್ನುವ ಹಾಗೆ ಹೇಳುತ್ತಿದ್ದಾರೆ. ನನಗಿಂತ ಮುಂಚೆ ಹನುಮೇಗೌಡರು ಹೋಗಿದ್ದರು. I think he was responsive to take these representations. ನನಗಿಂತಲೂ ಹನುಮೇಗೌಡರಿಗೆ ಚೆನ್ನಾಗಿ ಗೊತ್ತಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಕೆ. ಹೆಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಅಲ್ಲಿದ್ದೆ. ನಾನು ಏಳೂವರೆ ಗಂಟೆಗೆ ಮುಖ್ಯಮಂತ್ರಿಗಳ ಮನೆ ಹತ್ತಿರ ಹೋದೆ. ಸುಮಾರು 150 ರಿಂದ 200 ಹೆಣ್ಣು ಮಕ್ಕಳು ಮುಖ್ಯಮಂತ್ರಿಗಳ ಮನೆ ಹೊರಗಡೆ ನಿಂತಿದ್ದರು. ಪೋಲೀಸಿನವರು ಈಗ ಅವರಿಗೆ ಪುರುಸೊತ್ತು ಇಲ್ಲ, ಆಮೇಲೆ ನೋಡಿ ಎಂದು ಹೇಳುತ್ತಿದ್ದರು. ಮುಖ್ಯಮಂತ್ರಿಗಳ ಹತ್ತಿರ ನಾನೂ ಪೆರಿಕಲ್ ಮಲ್ಲಪ್ಪನವರು ಹೋಗಿ, ಹೆಣ್ಣುಮಕ್ಕಳು ನೂರಾರು ಮೈಲಿಯಿಂದ ಬಂದಿದ್ದಾರೆ. ಎಲ್ಲಾ ಬಡವರು, ಚಿಕ್ಕ ಚಿಕ್ಕ ಮಕ್ಕಳನ್ನು ಕರೆದುಕೊಂಡು ಬಂದಿದ್ದಾರೆ. ಕಷ್ಟದಲ್ಲಿರತಕ್ಕಂಥ ಹೆಣ್ಣುಮಕ್ಕಳನ್ನು ಕೇಳಿ ಏನು ಸಾಧ್ಯವಾಗುತ್ತದೆಯೋ ಅದನ್ನು ಮಾಡಿ ಕೊಡಿ ಎಂದು ಹೇಳಿದಾಗ, ಕರೆದುಕೊಂಡು ಬನ್ನಿ ಎಂದು ಹೇಳಿದರು. ನಾನೂ ಪೆರಿಕಲ ಮಲ್ಲಪ್ಪನವರು ಇಬ್ಬರು ಹೋಗಿ ನಾಲ್ಕು ಜನ ಅವರ ಪ್ರತಿನಿಧಿಗಳನ್ನು ಒಳಗೆ ಕರೆದುಕೊಂಡು ಬಂದು ಮುಖ್ಯಮಂತ್ರಿಗಳಿಗೆ ಭೇಟಿ ಮಾಡಿಸಿದೆವು.

ಬಹಳ ವಿನಯದಿಂದಲೇ ಹೇಳಿದರು. ನಿಮ್ಮದೂ ಬೇಕಾದಷ್ಟು ಸಮಸ್ಯೆಗಳು ಇವೆ. ನಿಮ್ಮ ಸಮಸ್ಯೆಗಳ ಬಗ್ಗೆ ಧಿಕ್ಕಾರ ಹಾಕದೆ ನನಗೆ ಬಂದು ಹೇಳಿ, ನನಗೆ ಜ್ಞಾನ ಇಲ್ಲವೇ ಅಥವಾ ನಿಮ್ಮಗಳ ಬಗ್ಗೆ ಕನಿಕರ ಇಲ್ಲವೇ? ಎಂದು ಕೇಳಿದರು. ನಮಗೆ 250 ರಿಂದ 300 ರೂಪಾಯಿ ಸಂಬಳ ಕೊಡುತ್ತಾರೆ, ನಾವು ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಕೆಲಸ ಮಾಡಬೇಕು. ನಾವು ಜೀವನ ಮಾಡುವುದಕ್ಕಾಗುವುದಿಲ್ಲ. ಇರತಕ್ಕಂಥವರೆಲ್ಲಾ ವಿಧವೆಯರು ಮತ್ತು ವಯಸ್ಸಾಗಿ ಮದುವೆಯಾಗದೆ ಇರತಕ್ಕಂಥವರು ಯಾರು ಮದುವೆ ಮಾಡುವುದಕ್ಕೆ ಆಗಲಿಲ್ಲವೋ ಅಂಥವರ ಹೆಣ್ಣು ಮಕ್ಕಳು ಇದ್ದಾರೆ. ಇಂಥಾ ಪರಿಸ್ಥಿತಿಯಲ್ಲಿ ನಮಗೆ ಸರ್ಕಾರ ಸಹಾಯ ಮಾಡದೇ ಇದ್ದರೆ ಹೇಗೆಂದು ಆ ಮೂರು ಜನ ಹೆಣ್ಣುಮಕ್ಕಳ ಪ್ರತಿನಿಧಿಗಳು ಕೇಳಿಕೊಂಡರು. ಮುಖ್ಯಮಂತ್ರಿಗಳು ಹೇಳಿದರು ಎಷ್ಟು ಸಾಧ್ಯವೋ ಅಷ್ಟು ಬೇಗ ಈ ಅಧಿವೇಶನ ಕಳೆದ ತಕ್ಷಣ ಏಪ್ರಿಲ್ ತಿಂಗಳಿನಲ್ಲಿ ಪರಿಶೀಲನೆ ಮಾಡಿ ಸಾಧ್ಯವಾದಷ್ಟು ಮಟ್ಟಿಗೆ ನಿಮಗೆ ಸಹಾಯ ಮಾಡುತ್ತೇವೆಂದು ಹೇಳಿದರು. ನಾವು ಆ ತರಹ ಧಿಕ್ಕಾರ ಹಾಕಬಾರದಾಗಿತ್ತು, ನಮಗೆ ಏನೋ ಮನಸ್ಸು ನೋವಾಗಿ ಆ ತರಹ ಅಂದೆವು ಎಂದು ಅವರು ನಗುನಗುತ್ತಾ ಹೋದರು ಸ್ವಾಮಿ. ಇಷ್ಟೇ ಅಲ್ಲಿ ನಡೆದದ್ದು. ಲಾಠಿ ಚಾರ್ಜು ಆದ ಸಂದರ್ಭದಲ್ಲಿ ನಾವು ಅಲ್ಲಿ ಇರಲಿಲ್ಲ. ಆ ಹೆಣ್ಣು ಮಕ್ಕಳೂ ಕೂಡ ಅದರ ಬಗ್ಗೆ ಹೇಳಲಿಲ್ಲ. ಆದರೆ, ಒಂದು ವಿಚಾರ ಹೇಳಿದರು. ಬಾಗಲಕೋಟೆಯಿಂದ ಬರುವಾಗ ಬಸ್ ಸ್ಟ್ಯಾಂಡ್‌ನಲ್ಲೋ ಅಥವಾ ರೈಲ್ವೇ ಸ್ಟೇಷನ್‌ನಲ್ಲೋ ಗಲಾಟೆ ಮಾಡಿದರು ಎಂದು ಹೇಳುತ್ತಿದ್ದರು. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ಯಾರು ತಪ್ಪು ಮಾಡಿದ್ದಾರೋ ವಿಚಾರ ಮಾಡುತ್ತೇವೆಂದು ಹೇಳಿದರು.

ಅಧ್ಯಕ್ಷರು : ಕುಳಿತುಕೊಳ್ಳಿ.

ಶ್ರೀ ಕೆ. ಹೆಚ್. ಹನುಮೇಗೌಡ : ನಮಗೆ ಏನೂ ಹೇಳುವ ಹಕ್ಕು ಇಲ್ಲವೇ? ಅವರಿಗೆ ಎಷ್ಟು ಜವಾಬ್ದಾರಿ ಇದೆಯೋ, ಅಷ್ಟೇ ಜವಾಬ್ದಾರಿ ನಮಗೂ ಇದೆ. ನಿನ್ನೆ ದಿವಸ ಅವರಿಗೆ ಕೊಡಬೇಕೆಂದು ಪ್ರತಿಪಾದನೆ ಮಾಡಿದವರ ಪೈಕಿ ನಾವೂ ಇದ್ದೇವೆ. ಅದರ ಬಗ್ಗೆ ನಾನೂ ಮಾತನಾಡಿದೆ. ಇತರರೂ ಮಾತನಾಡಿದರು. ದಯವಿಟ್ಟು ನಾನು ಹೇಳುವುದಕ್ಕೆ ಬಿಡಿ.

11.50 ಎ.ಎಂ.

ಅದೇ ಸಂದರ್ಭದಲ್ಲಿ ನಾವು ಕಂಡಿದ್ದು ಏನು? ನಿಮಗೆ ಇರುವ ಕನಿಕರ ನಮಗೆ ಇಲ್ಲವೆ? ಈ ದೇಶದ ಬಡ ಹೆಣ್ಣು ಮಕ್ಕಳು ಅವರು ಅಲ್ಲವೇ? ನಿಮಗೆ ಓಟು ಕೊಟ್ಟ ಹಾಗೆ ನಮಗೆ ಕೊಟ್ಟಿಲ್ಲವೆ? ನಮಗೆ ಜ್ಞಾನ ಇಲ್ಲವೆ?

ಅಧ್ಯಕ್ಷರು : ಮಾನ್ಯ ಹನುಮೇಗೌಡರು ಅವರನ್ನು ಉದ್ದೇಶಿಸಿ ಮಾತನಾಡಬೇಡಿ. ಹೇಳಬೇಕಾದುದನ್ನು ನನಗೆ ಹೇಳಿ.

ಶ್ರೀ ಕೆ. ಹೆಚ್. ಹನುಮೇಗೌಡ : ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಎನ್‌ಕ್ವೈರಿ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದರು.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯರವರು, ವಾಟಾಳ್‌ನಾಗರಾಜ್ ಅವರು ಮತ್ತು ದೇಶಪಾಂಡೆಯವರು ಹೇಳಿದ ಹಾಗೆ, ನಂಜಪ್ಪನವರು, ಈಶ್ವರಪ್ಪನವರು ಕೂಡ ಹೇಳಿದ್ದಾರೆ. ಹನುಮೇಗೌಡರು ಕೂಡ ಅಲ್ಲಿದ್ದರು . ನಿನ್ನೆ ಕೂಡ ಅಂಗನವಾಡಿ ಕಾರ್ಯಕರ್ತರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ನಾನೂ ಕೂಡ ಆಶ್ವಾಸನೆಯನ್ನು ಕೊಟ್ಟಿದ್ದೇನೆ. ಅವರಿಗೆ ಸರಕಾರದವರು ಯಾವ ರೀತಿಯಲ್ಲಿ ಪರಿಹಾರವನ್ನು ಕೊಡಬೇಕೆಂದು ಹೇಳಿದ್ದೇನೆ. ಇನ್ನೂ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಇನ್ನೂ ಹೆಚ್ಚಿನ ಪರಿಹಾರ ಸಿಗಬಹುದೆಂದು ಅಲ್ಲಿಗೆ ಹೋಗಿರಬಹುದು. ಈ ಬಗ್ಗೆ ಮುಖ್ಯಮಂತ್ರಿಯವರಿಗೆ ಅಂಗನವಾಡಿ ಕಾರ್ಯಕರ್ತರು ಕಬ್ಬನ್‌ಪಾರ್ಕ್‌ನಲ್ಲಿ ಕುಳಿತು ಧರಣಿ ಮಾಡುತ್ತಿರುವುದರ ಬಗ್ಗೆ ಮನವರಿಕೆ ಮಾಡಿಕೊಟ್ಟಿದ್ದೇನೆ. ಶಿವಮೊಗ್ಗ, ಬೆಳಗಾಂ, ಬಾಗಲಕೋಟೆ ಮುಂತಾದ ಕಡೆಗಳಿಂದ ಬಂದ ಜನರು ತಮಗೆ ಪೋಲೀಸರಿಂದ ಆದ ಹಿಂಸೆಯ ಬಗ್ಗೆ ಹೇಳಿದ್ದಾರೆ. ಹಾಗೆ ಆಗಬಾರದು, ಪ್ರಜಾಪ್ರಭುತ್ವದಲ್ಲಿ ಅವರಿಗೆ ತಮ್ಮ ಕಷ್ಟಗಳನ್ನು ಹೇಳಿಕೊಳ್ಳುವ ಒಂದು ಅವಕಾಶ ಇದ್ದು ಅದನ್ನು ಅವರಿಗೆ ಕೊಡಲೇಬೇಕು. ಹಾಗಾಗಿ ಅವರನ್ನು ತಡೆಗಟ್ಟಬಾರದು ಎಂಬ ಮಾತನ್ನು ಕೂಡ ಹೇಳಿದ್ದೇನೆ. ಇವೊತ್ತಿನ ಘಟನೆ ಬಗ್ಗೆ ತಾವುಗಳು ಏನು ಪ್ರಸ್ತಾಪ ಮಾಡಿದ್ದೀರಿ. ಈಗಲೇ ನಾನು ಪೋಲೀಸ್ ಕಮಿಷನರ್ ಜೊತೆಯಲ್ಲಿ ಮಾತನಾಡುತ್ತೇನೆ. ವಿವರಗಳನ್ನು ಪಡೆದು, ಎಲ್ಲಿ ಲಾಠಿಚಾರ್ಜ್‌ನಿಂದ ಪೆಟ್ಟು ಆಗಿ ಚಿಕಿತ್ಸೆ ಬೇಕಾಗಿದೆ ಅದನ್ನು ಕೂಡ ಮಾಡಿಸಿಕೊಡುತ್ತೇನೆ. ಎಲ್ಲಿಯಾದರೂ ಕೂಡ ಸ್ಟೇಶನ್‌ನಲ್ಲಿ ಬಂಧಿತರಿದ್ದರೆ ಅವರನ್ನು ಬಿಡುಗಡೆ ಮಾಡಿಸುತ್ತೇನೆ. ಏಪ್ರಿಲ್ ತಿಂಗಳಿನಲ್ಲಿ ಮುಖ್ಯಮಂತ್ರಿಗಳು ಇದರ ಬಗ್ಗೆ ಚರ್ಚೆ ಮಾಡುತ್ತೇನೆ ಎಂದು ಹೇಳಿದ್ದಾರೆ, ಆ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ, ನೀರಿನ ಸಮಸ್ಯೆ ಬಗ್ಗೆ ಮಾನ್ಯ ಸಚಿವರು ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದು ಹೇಳಿದ್ದರು. ನೀರಿನ ಸಮಸ್ಯೆಯು ಬಹಳ ಗಂಭೀರವಾಗಿದೆ.

ಅಧ್ಯಕ್ಷರು : ತಾವುಗಳೆಲ್ಲರೂ ಕೊಟ್ಟ ಕಾಗದಗಳನ್ನು ನಾನು ಇಟ್ಟುಕೊಂಡಿದ್ದೇನೆ. ನಾನು ಅವಕಾಶ ಕೊಡುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

ವಿಷಯ : ಅರೆಕಾಲಿಕ ಉಪನ್ಯಾಸಕರನ್ನು ಖಾಯಂಗೊಳಿಸುವ ಬಗ್ಗೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಅರೆಕಾಲಿಕ ಉಪನ್ಯಾಸಕರ ಬಗ್ಗೆ ಒಂದು ಸೂಚನೆಯನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು : ಅರೆಕಾಲಿಕ ಉಪನ್ಯಾಸಕರ ಬಗ್ಗೆ ಮಾನ್ಯ ದೇಶಪಾಂಡೆಯವರು, ಯಡಿಯೂರಪ್ಪನವರು, ಈಶ್ವರಪ್ಪನವರು ಕೊಟ್ಟಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಕರ್ನಾಟಕ ರಾಜ್ಯ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳ ಅರೆಕಾಲಿಕ ಉಪನ್ಯಾಸಕರುಗಳು 1700 ಜನರಿದ್ದಾರೆ. ನಮಗೆ ಜಾಬ್ ಸೆಕ್ಯುರಿಟಿ ಇಲ್ಲ, ಸಂಬಳ ಸಾರಿಗೆಗಳು ಇಲ್ಲ, ನಮ್ಮನ್ನು ಖಾಯಂ ಮಾಡಿ ಎಂದು ನಾಲ್ಕು ದಿವಸಗಳಿಂದ ಕಬ್ಬನ್‌ಪಾರ್ಕ್‌ನಲ್ಲಿ ಆಮರಣಾಂತಿಕ ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಅವರಲ್ಲಿ